ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Spl.C.NDPS.8/2021

ಸಾಕ್ಷಿದಾರರ ಹೆಸರು	:	ಶಿವರಾಜ ಪಾಟೀಲ ಜಿ.
ತಂದೆಯ/ಗಂಡನ ಹೆಸರು	:	ಚನ್ನಬಸವನಗೌಡ ಜಿ ಎಸ್.
ವಯಸ್ಸು	:	38 ವರ್ಷ
ಉದ್ಯೋಗ	:	ಅಬಕಾರಿ ಮುಖ್ಯ ಪೇದೆ, ಅಬಕಾರಿ ನಿರೀಕ್ಷಕರ ಕಛೇರಿ, ದಾವಣಗೆರೆ
ವಾಸ ಸ್ಥಳ	:	ದಾವಣಗೆರೆ

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 2

ದಿ: 12-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ):

1. ದಿಃ 21-08-2018 ರಿಂದ ಇಲ್ಲಿಯವರೆಗೆ ನಾನು ಅಬಕಾರಿ ಪೇದೆ ಮತ್ತು ಅಬಕಾರಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ದಿಃ 03-04-2021 ರಂದು ನಮ್ಮ ಮೇಲಾಧಿಕಾರಿಗಳಾದ ಕಛೇರಿಯ ಅಬಕಾರಿ ನಿರೀಕ್ಷಕರಿಗೆ ಚಾಸಾ-1 ರವರು ಇಬ್ಬರು ಸರ್ಕಾರಿ ಪಂಚರನ್ನು ನೇಮಿಸುವಂತೆ ಕೋರಿಕೊಂಡರು. ಆ ಪ್ರಕಾರ ನಮ್ಮ ಮೇಲಾಧಿಕಾರಿಗಳು ನನ್ನನ್ನು ಮತ್ತು ಚಾಸಾ-3 ರವರನ್ನು ಸರ್ಕಾರಿ ಪಂಚರಾಗಿ ನೇಮಿಸಿರುತ್ತಾರೆ. ನಾವು ಅದೇ ದಿನ ಬೆಳಿಗ್ಗೆ 10.45 ಗಂಟೆಗೆ CEN ಪೊಲೀಸ್ ಠಾಣೆಗೆ ಹಾಜರಾಗಿರುತ್ತೇನೆ. ಅಲ್ಲಿ ಇದ್ದ ಚಾಸಾ-1 ರವರು ನಮ್ಮನ್ನು ಪರಿಚಯಿಸಿಕೊಂಡರು. ನಂತರ ಅಲ್ಲಿ ಚಾಸಾ-4 ರವರು ಬಂದಿರುತ್ತಾರೆ. ಚಾಸಾ-1 ರವರು ನಮಗೆ

ತಿಳಿಸಿದ್ದು ಏನೆಂದರೆ ಅವರು ಆ ದಿನ ಬೆಳಿಗ್ಗೆ 10.00 ಗಂಟೆಗೆ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿರುವಾಗ ಅವರಿಗೆ ಬಂದ ಮಾಹಿತಿ ಪ್ರಕಾರ ದಾವಣಗೆರೆಯ ಬಾಡಾ ಕ್ರಾಸ್ ಹತ್ತಿರ ಚಿಂದೋಡಿ ಲೀಲಾ ಕಲಾ ಭವನದ ಹಿಂಭಾಗದಲ್ಲಿ ಹೈವೇ ರಸ್ತೆ ಸರ್ವೀಸ್ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಇದನ್ನು ನಮ್ಮ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಅಲ್ಲಿ ದಾಳಿ ಮಾಡಬೇಕಾಗಿರುವುದರಿಂದ ತಾವುಗಳು ಪಂಚರಾಗಿ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ ನಾನು ಮತ್ತು ಚಾಸಾ-3 ರವರು ಒಪ್ಪಿಕೊಂಡಿರುತ್ತೇವೆ. ನಂತರ ನಮಗೆ ಪಂಚರ ನೋಟಿಸ್ಸನ್ನು ಜಾರಿ ಮಾಡಿರುತ್ತಾರೆ. ನಾನು ಈಗ ನೋಡಿದ ನಿಪಿ-5 ರಲ್ಲಿ ನನ್ನ ಸಹಿ ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-5(ಬಿ) ಅಂತ ಗುರುತಿಸುತ್ತೇನೆ. ಆ ನೋಟಿಸ್ಸು ನಮಗೆ ಬೆಳಿಗ್ಗೆ 10.45 ಗಂಟೆಗೆ ಜಾರಿ ಮಾಡಲಾಗಿತ್ತು. ನಂತರ ಅಲ್ಲಿ ಇದ್ದ ಚಾಸಾ-4 ರವರಿಗೂ ಸಹ ಮಾಹಿತಿ ತಿಳಿಸಿರುತ್ತಾರೆ. ಚಾಸಾ-5 ರಿಂದ 11 ರವರು ಪೊಲೀಸ್ ಸಿಬ್ಬಂದಿಗಳು ಇರುತ್ತಾರೆ. ಅವರಿಗೂ ಸಹ ದಾಳಿ ಬಗ್ಗೆ ಮಾಹಿತಿ ನೀಡಿರುತ್ತಾರೆ.

2. ನಂತರ ಬೆಳಿಗ್ಗೆ 11.00 ಗಂಟೆಗೆ ಪೊಲೀಸ್ ಠಾಣೆಯಿಂದ ಲ್ಯಾಪಟಾಪ್, ಪ್ರಿಂಟರ್, ಎಲೆಕ್ಟ್ರಾನಿಕ್ ತೂಕ ಯಂತ್ರ, ಹ್ಯಾಂಡಿ ಕ್ಯಾಮರಾ ಮತ್ತು ಇತರ ಗಾಂಜಾ ಕಿಟ್ ಗಳನ್ನು ಎರಡು ಪ್ರತ್ಯೇಕ ಇಲಾಖಾ ಜೀಪಿನಲ್ಲಿ ಹೊರಟು ಬೆಳಿಗ್ಗೆ 11.30 ಗಂಟೆಗೆ ಹದಡಿ ರಸ್ತೆ ಮುಖಾಂತರ ಆವರಗೆರೆ ರಸ್ತೆಯ ಮಾಹಿತಿ ಇದ್ದ ಸ್ಥಳದಿಂದ 150 ಮೀ. ದೂರದಲ್ಲಿರುವ ಗಣಪತಿ ದೇವಸ್ಥಾನದ ಹತ್ತಿರ ಜೀಪುಗಳನ್ನು ಮರೆಯಲ್ಲಿ ನಿಲ್ಲಿಸಿದ್ದೆವು. ನಂತರ ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ಗಾಂಜಾಕ್ಕೆ ಸಂಬಂಧಪಟ್ಟ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು. ನಂತರ ಮಾಹಿತಿ ಇದ್ದ ಸ್ಥಳದ ಕಡೆಗೆ ಪರಿಶೀಲಿಸಲಾಗಿ ಸರ್ವೀಸ್ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಅನುಮಾನಸ್ಪದವಾಗಿ ನಿಂತಿದ್ದು, ಅದರ ಪೈಕಿ ಒಬ್ಬರು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದರು. ನಾವು ಬೆಳಿಗ್ಗೆ 11.45 ಗಂಟೆಗೆ ಅವರ ಹತ್ತಿರ ಹೋಗಿ ಹಿಡಿಯಲು ಪ್ರಯತ್ನಿಸಿದಾಗ ಚೀಲವನ್ನು ಅಲ್ಲೇ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ನಂತರ ಪೊಲೀಸ್ ಸಿಬ್ಬಂದಿ ಅವರನ್ನು ಸುತ್ತುವರೆದು ಹಿಡಿದರು.

ನಂತರ ಅವರ ಹೆಸರು ವಿಳಾಸವನ್ನು ಚಾಸಾ-1 ರವರು ವಿಚಾರಿಸಿದರು. ಚೀಲ ಹಿಡಿದು ನಿಂತಿದ್ದ ವ್ಯಕ್ತಿ ತಾನು ಅಂತರಾಮ ತೀರ್ಕಿ ಅಂತ ಇನ್ನೊಬ್ಬರು ಮಧುರಾಜ ಅಂತ ತಿಳಿಸಿರುತ್ತಾರೆ. ಚೀಲದಲ್ಲಿ ಏನಿದೆ ಅಂತ ವಿಚಾರಿಸಿದಾಗ ಅವರು ಅದರಲ್ಲ ಗಾಂಜಾ ಇದೆ ಅಂತ ತಿಳಿಸಿರುತ್ತಾರೆ. ನಂತರ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇತ್ತು. ಈ ಗಾಂಜಾವನ್ನು ಎಲ್ಲಿಂದ ತಂದಿದ್ದೀರಾ ಅಂತ ಕೇಳಿದಾಗ ಗೋವಾ ರಾಜ್ಯದ ಕೋಲ್ವಾ ಬೀಚ್ ಅಲ್ಲಿ ವಾಸವಾಗಿರುವ ಅನಿಲ್ ಜಾಕೂರು 3 ನೇ ಆರೋಪಿ ಎಂಬುವವರು ನಮಗೆ ಕಳುಹಿಸಿರುತ್ತಾರೆ. ಅದನ್ನು ಮಾರಾಟ ಮಾಡಿ ಬಂದ ಹಣವನ್ನು ಆತನಿಗೆ ನೀಡಿದ್ದಲ್ಲಿ ಆಗ ಅವರು ನಮಗೂ ಸಹ ಹಣ ನೀಡುವುದಾಗಿ ಹೇಳಿದರು. ಗಾಂಜಾವನ್ನು ಸಣ್ಣ ಸಣ್ಣ ಪಾಲಿಥಿನ್ ಕವರ್ ಗಳಲ್ಲಿ ಹಾಕಿ 400 ರೂಪಾಯಿ 500 ರೂಪಾಯಿಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ.

3. ನಂತರ ಚೀಲವನ್ನು ಪರಿಶೀಲಿಸಿದಾಗ ಬ್ರೌನ್ ಕಲರ್ ಟೇಪ್ ನಿಂದ ಪ್ಯಾಕ್ ಮಾಡಿದ ವಸ್ತುಗಳು ಹಾಗೂ ಇನ್ನೊಂದು ಬಿಳಿ ಬಣ್ಣದ ಬಟ್ಟೆಯ ಚೀಲದಲ್ಲಿ ಬೀಜ, ಹೂವು ಮತ್ತು ಮೊಗ್ಗು ಮಿಶ್ರಿತ ಗಾಂಜಾ ಇದ್ದು, ಅದರಿಂದ ಬರುತ್ತಕ್ಕಂತಹ ಗಾಟು ವಾಸನೆಯಿಂದ ಅದು ಗಾಂಜಾ ಅಂತ ನಮಗೆ ತಿಳಿಯಿತು. ಆನಂತರ ಸದರಿ 3 ಬ್ರೌನ್ ಕಲರ್ ಟೇಪ್ ನಿಂದ ಪ್ಯಾಕ್ ಮಾಡಿದಂತಹ ಪ್ಯಾಕೆಟ್ ಗಳನ್ನು ಅಂತರಾಮ ತೀರ್ಕಿರವರಿಂದ ಕತ್ತರಿಯಿಂದ ಓಪನ್ ಮಾಡಿಸಿದಾಗ ಅದರಲ್ಲಿ ಸಹ ಗಾಟು ವಾಸನೆಯಿಂದ ಅದು ಗಾಂಜಾ ಇರುವುದು ಕಂಡು ಬಂತು. ಅದನ್ನು ಪ್ಲಾಸ್ಟಿಕ್ ಕವರ್ ನಿಂದ ಪ್ಯಾಕ್ ಮಾಡಿ ಬ್ರೌನ್ ಕಲರ್ ಟೇಪ್ ನಿಂದ ಸುತ್ತುವರೆದಿರುತ್ತಾರೆ. ಸದರಿ ಕವರ್ ನ್ನು ಓಪನ್ ಮಾಡಿ ಆನಂತರ ಜೀಪನ್ನು ಅಲ್ಲಿಗೆ ಕರೆಸಿ ಆ ಜೀಪಿನಲ್ಲಿದ್ದಂತಹ ಎಲೆಕ್ಟ್ರಾನಿಕ್ ತೂಕದ ಯಂತ್ರದ ಸಹಾಯದಿಂದ ಅಲ್ಲಿ ಸಿಕ್ಕಿದಂತ ಗಾಂಜಾವನ್ನು ತೂಕ ಮಾಡಿದಾಗ ಒಂದು 2 ಕೆ.ಜಿ. 110 ಗ್ರಾಂ., ಇನ್ನೊಂದು 2 ಕೆ.ಜಿ. 215 ಗ್ರಾಂ., ಮೂರನೇಯದ್ದು 2 ಕೆ.ಜಿ. 185 ಗ್ರಾಂ., ನಾಲ್ಕನೇಯದ್ದು 2 ಕೆ.ಜಿ. 90 ಗ್ರಾಂ. ಇತ್ತು. ಅದನ್ನು ಚಾಸಾ-1 ರವರು 1 ರಿಂದ 4 ಅಂತ ಕ್ರಮಸಂಖ್ಯೆಗಳನ್ನು ನೀಡಿದರು. ಒಟ್ಟು ತೂಕ 8 ಕೆ.ಜಿ. 600 ಗ್ರಾಂ.

ಗಾಂಜಾ ಇರುತ್ತದೆ. ನಂತರ ಚಾಸಾ-1 ರವರು ಅಲ್ಲಿ ಇದ್ದಂತಹ ವ್ಯಕ್ತಿಗಳಿಗೆ ಅಂಗ ಶೋಧನೆ ಬಗ್ಗೆ ನೋಟಿಸ್ಸು ನೀಡಿ ನಾನು ನಿಮ್ಮನ್ನು ಪರಿಕ್ಷೆ ಮಾಡಬಹುದಾ ಅಥವಾ ಪತ್ರಾಂಕಿತ ಅಧಿಕಾರಿಗಳು ಶೋಧನೆ ಮಾಡಬಹುದಾ ಅಂತ ಕೇಳಿದಾಗ ಅವರು ನಮಗೆ ಪತ್ರಾಂಕಿತ ಅಧಿಕಾರಿಗಳು ಶೋಧನೆ ಮಾಡಬಹುದಾ ಅಂತ ಹೇಳಿದರು. ಈಗ ತೋರಿಸಿದ ನಿಪಿ-9 ಮತ್ತು 10 ರಲ್ಲಿ ನನ್ನ ಸಹಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ನಿಪಿ-9(ಸಿ) ಮತ್ತು 10(ಸಿ) ಅಂತ ಗುರುತಿಸುತ್ತೇನೆ. ಪತ್ರಾಂಕಿತ ಅಧಿಕಾರಿಗಳು ಮಧುರಾಜರವರಿಗೆ ಅಂಗ ಶೋಧನೆ ಮಾಡಿದಾಗಅವರ ಪ್ಯಾಂಟ್ ನ ಬಲ ಜೇಬಿನಲ್ಲಿ 100 ಮುಖಬೆಲೆಯ 9 ನೋಟುಗಳು ಹಾಗೂ 25 ಸಣ್ಣ ಪಾಲಿಥಿನ್ ಕವರ್ ಗಳು ದೊರಕಿರುತ್ತವೆ. ಆ ಹಣ ಗಾಂಜಾ ಮಾರಾಟ ಮಾಡಿ ಬಂದ ಹಣ ಅಂತ ತಿಳಿಸಿರುತ್ತಾರೆ. ಆ ಗಾಂಜಾವನ್ನು ಪಾಲಿಥಿನ್ ಕವರ್ ಗಳಲ್ಲಿ ಹಾಕಿ 400-500 ರೂಪಾಯಿಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ನಂತರ ಇನ್ನೊಬ್ಬ ವ್ಯಕ್ತಿಯಾದ ಅಂತರಾಮ ತೀರ್ಕಿರವರನ್ನು ಅಂಗ ಶೋಧನೆ ಮಾಡಿದಾಗ ಆತನ ಪ್ಯಾಂಟ್ ನ ಜೇಬಿನಲ್ಲಿ MI ಕಂಪನಿಯ ಕಪ್ಪು ಬಣ್ಣದ Android mobile ದೊರಕಿದ್ದು ಅದರಲ್ಲಿ ಒಂದು ಏರಟೆಲ್ ಸಿಮ್ ಇನ್ನೊಂದು ಜಿಯೋ ಸಿಮ್ ಇತ್ತು. ಆತನ ಜೇಬಿನಲ್ಲಿ ಇನ್ನೂ ಯಾವುದೇ ಗಾಂಜಾ ಪದಾರ್ಥ ಸಿಕ್ಕಿರುವುದಿಲ್ಲ. ಸ್ಥಳದಲ್ಲಿಯೇ ಚಾಸಾ-1 ರವರು ನಾಗರಾಜರವರ ಮೂಲಕ ಸ್ಯಾಂಪಲ್ ಚೀಟಿಗಳನ್ನು ಸಿದ್ಧಪಡಿಸಿ ಪಂಚರ ಹಾಗೂ ಅಧಿಕಾರಿಗಳ ಸಹಿ ಪಡೆದು ಸಿಕ್ಕಿದ್ದಂತಹ ಮುದ್ದೆ ಮಾಲುಗಳನ್ನು CEN ಅಂತ ಸೀಲ್ ಮಾಡಿದರು. ಸ್ಯಾಂಪಲ್ ಚೀಟಿಗಳನ್ನು ಅದರ ಮೇಲೆ ಅಂಟಿಸಿರುತ್ತಾರೆ. ಅಂತರಾಮ ತೀರ್ಕಿರವರಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ. ಆದ್ದರಿಂದ ಚಾಸಾ-3 ಮತ್ತು 4 ರವರಿಗೆ ಹಿಂದಿ ಮತ್ತು ಕನ್ನಡ ಭಾಷೆ ಬರುತ್ತಿರುವುದರಿಂದ ಹಿಂದಿ ಭಾಷೆಯಲ್ಲಿ ತಿಳಿಸಿ ಬೆಳಿಗ್ಗೆ 11.40 ರಿಂದ ಮಧ್ಯಾಹ್ನ 1.30 ರವರೆಗೆ ಮಹಜರ ಕ್ರಮ ಜರುಗಿಸಲಾಯಿತು. ಚಾಸಾ-1 ರವರು ಮಾಹಿತಿ ಕೊಟ್ಟು ಮಹಜರನ್ನು ಬರೆಸಿರುತ್ತಾರೆ. ಮಹಜರನ್ನು ಈಗ ನೋಡುತ್ತಿದ್ದ, ಅದನ್ನು ಈಗಾಗಲೇ ನಿಪಿ-12 ಅಂತ ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ-12(ಬಿ) ಅಂತ ಗುರುತಿಸುತ್ತೇನೆ. ಆ ಸ್ಥಳದಲ್ಲಿ ನಿಪಿ-23 ರಂತೆ ನಕಾಶೆಯನ್ನು ತಯಾರಿಸಲಾಯಿತು.

ನನ್ನ ಸಹಿಯನ್ನು ನಿಪಿ-23(ಬಿ) ಅಂತ ಗುರುತಿಸುತ್ತೇನೆ. ಜಪ್ತು ಪಂಚನಾಮೆಯ ಪ್ರಕ್ರಿಯೆಯನ್ನು ಚಾಸಾ-9 ರವರ ಮುಖಾಂತರ ಫೋಟೋಗಳನ್ನು ತೆಗೆಸಲಾಯಿತು. ಅವುಗಳನ್ನು ಈಗಾಗಲೇ ನಿಪಿ-13 ರಿಂದ 21 ಅಂತ ಗುರುತಿಸಲಾಗಿದೆ. ಈ ಫೋಟೋಗಳಲ್ಲಿ ನಾನು, ಇತರ ಪೊಲೀಸರು, ಚಾಸಾ-4, 1, ಆರೋಪಿತರು ಹಾಗೂ ಗಾಂಜಾ, ಗಾಂಜಾ ತೂಕ ಮಾಡುವುದು ಕಂಡು ಬರುತ್ತದೆ. ನಂತರ ಆರೋಪಿತರು ಮತ್ತು ವಸ್ತುಗಳನ್ನು ವಶಪಡಿಸಿಕೊಂಡು ನಾವು CEN ಪೊಲೀಸ್ ಠಾಣೆಗೆ ಹೋದೆವು. ಮಾಲು ಸಹಿತ ಆರೋಪಿತರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಮುಂದಿನ ಕ್ರಮ ಜರುಗಿಸಲಾಯಿತು. ಆ ದಿನ ವಶಪಡಿಸಿಕೊಂಡ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರ ಪೈಕಿ 2 ನೇ ಆರೋಪಿ ಗೋವಾ ಜೆ.ಸಿ.ಯಲ್ಲಿ ಇದ್ದು, ಅವರನ್ನು ವಿಸಿ ಮುಖಾಂತರ ನೋಡಿ ಗುರುತಿಸುತ್ತೇನೆ. ಆ ದಿನ ವಶಪಡಿಸಿಕೊಂಡ ಮು.ಮಾ. 1 ರಿಂದ 8 ನ್ನು ನೋಡಿ ಗುರುತಿಸುತ್ತೇನೆ. ಮು.ಮಾ.1 ರಿಂದ 4 ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆ.

ಪಾಟೀ ಸವಾಲುಃ ಶ್ರೀ ., ವಕೀಲರಿಂದ ಆರೋಪಿತರ ಪರವಾಗಿ:

ಆರೋಪಿ ಪರ ವಕೀಲರು ಸಮಯ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.